ದಿನಾಂಕಃ **14-03-2023**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಬಿ ಜೆ ಆರ್ ವಕೀಲರಿಂದಃ

ನಾನು ಹುಟ್ಟಿದಾಗಿನಿಂದಲೂ ನನ್ನ ತಂದೆಯ ಸ್ವತ್ತನ್ನು ಅನುಭವಿಸುತ್ತಿದ್ದೇನೆ. ನನ್ನ ಜಮೀನಿನ ಪೂಃ ಬಂಡಿಜಾಡು , ಓಣಿ , ಪಕ್ಕದಲ್ಲಿ ಸ.ನಂ. 9 ಪಃ ಸ.ನಂ.34/31 ರಲ್ಲಿ ಯಾರಿಗೂ ಸಾಗುವಳಿ ನೀಡಿಲ್ಲ , ಮಂಜುಳಮ್ಮ , ರಂಗಶಾಮಯ್ಯ , ಚಂದ್ರಮ್ಮ , ರಮೇಶ , ರಾಮಯ್ಯ ಬೇಸಾಯ ಮಾಡುತ್ತಿದ್ದಾರೆ. ಮಂಜುಳ ಎಂದರೆ ನನ್ನ ಅಣ್ಣನ ಮಗನ ಹೆಂಡತಿ , ಚಂದ್ರಮ್ಮ ನನ್ನ ಹೆಂಡತಿ , ಸ.ನಂ.34/31 ಈಗಲೂ ಸರ್ಕಾರದ ಹೆಸರಿನಲ್ಲಿದೆ ಯಾರಿಗೂ ಸಾಗುವಳಿ ನೀಡಿಲ್ಲ ಎಂದರೆ ಸರಿ. ಉಃ ಲಕ್ಕಯ್ಯ , ತಿಮ್ಮಕ್ಕ ಸ.ನಂ. 30 , ದಃ ಸ.ನಂ.28.

ನನ್ನ ಸ್ವತ್ತಿನ ಪಶ್ಚಿಮಕ್ಕೆ ಸ.ನಂ. ಮಾತ್ರ ಬರೆಸಿದ್ದೇನೆ , ಹೆಸರು ಬರೆಸಿಲ್ಲ , ಬರೆಸಲು ತೊಂದರೆ ಇರಲಿಲ್ಲ. ಸ.ನಂ.34 ರಲ್ಲಿ 6 ಎಕರೆ 9 ಗುಂಟೆ ಜಮೀನು ಇದೆ. ಇದರ ಚೆಕ್ಕುಬಂದಿ ಪೂಃ ಸ.ನಂ.28 , ಪಃ ಸ.ನಂ.35 , ಉಃ ಸ.ನಂ.31 , ದಃಸ.ನಂ.23 ರ ಜಮೀನು. ಸ.ನಂ.29 ಮತ್ತು ಸ.ನಂ. 60 ರ ಮಧ್ಯೆ ½ ಕಿ.ಮೀ ಅಂತರವಿದೆ. ಸ.ನಂ.34 ರಲ್ಲಿ ನನ್ನ ಹೆಂಡತಿ ಚಂದ್ರಮ್ಮ ಅರ್ಜಿ ಸಲ್ಲಿಸಿದ್ದಾರೆ. ಹಿಂಬರಹ ನನ್ನ ಬಳಿ ಇದೆ. ಹಿಂಬರಹ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಸ.ನಂ. 34 ರಲ್ಲಿ ಮಂಜುಳಮ್ಮ , ನರಸಿಂಹಯ್ಯ ಸ್ವಾಧೀನದಲ್ಲಿಲ್ಲ ಎಂದರೆ ಸರಿ.

SDMC ಸಂಸ್ಥೆಗೆ ನಾನು ಹಿಂದೆ ಅಧ್ಯಕ್ಷನಾಗಿದೆ ಎಂದು ಸಾಕ್ಷಿ ನುಡಿಯುತ್ತಾರೆ. ವಾದಿಯು ದಾಖಲಿಸಿರುವ ದಾವೆಯ ಸಂಖ್ಯೆ 474/2012. ಸ.ನಂ.60 ರಲ್ಲಿ ನಾಗರತ್ನಮ್ಮ , ಲಿಂಗಯ್ಯ , ಪಂಚಾಕ್ಷರಯ್ಯ , ವಿ.ಪಿ. ಸಿದ್ದಯ್ಯ , ತೆಂಗಿನಮರದ ರಂಗಯ್ಯ , ಗಂಗಣ್ಣ , ಸಿದ್ದಯ್ಯ , ಕರಿಯಮ್ಮ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸ.ನಂ.60 ರಲ್ಲಿ 2001 ರಿಂದ

2021 ರವರೆಗೆ ಸದರಿಯವರ ಹೆಸರಿನಲ್ಲಿ ಖಾತೆ ಪಹಣಿಗಳು ಇವೆ ಎಂದರೆ ಸರಿ. ಸದರಿ ಪಹಣಿಗಳನ್ನು ನಿಪಿ-13 ರಿಂದ ನಿಪಿ- 33 ಎಂದು ಗುರುತಿಸಲಾಯಿತು. ಸದರಿಯವರಿಗೆ ಮಂಜೂರಾದಾಗಿನಿಂದ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸ.ನಂ.60 , ಸ.ನಂ.29 ರ ಪಶ್ಚಿಮಕ್ಕೆ ಹೊಂದಿಕೊಂಡಿದೆ ಎಂದರೆ ಸರಿಯಲ್ಲ. ಸರ್ವೇ ಅಧಿಕಾರಿಗಳಿಂದ ಅಳತೆ ಮಾಡಿಸಲು ನನ್ನ ತಕರಾರು ಇಲ್ಲ ಎಂದರೆ ಸರಿ. ನನ್ನ ಜಮೀನನ್ನು ಸರ್ವೆ ಅಧಿಕಾರಿಗಳಿಂದ ಅಳತೆ ಮಾಡಿಸಿ ದುರಸ್ತು ಮಾಡಿಸಿಕೊಂಡಿದ್ದೇನೆ ಎಂದು ಸಾಕ್ಷಿಯು ನುಡಿಯುತ್ತಾರೆ. ಸ.ನಂ.29 ರಲ್ಲಿ ಸರ್ವೇ ಅಧಿಕಾರಿಗಳು ಮಾಡಿರುವ ನಕಾಶೆ ಸರಿ ಇದೆ ಎಂದರೆ ಸರಿ. ಸದರಿ ನಕಾಶೆಯಲ್ಲಿ ಚೆಕ್ಕುಬಂದಿ ಸರಿ ಇದೆ ಎಂದರೆ ಸರಿ. ಮತ್ತು ನಾಲ್ಕು ಕಡೆ ಬರೆದಿರುವ ಸರ್ವೆ ನಂ. ಗಳು ಸರಿ ಇದೆ ಎಂದರೆ ಸರಿ. ವಾದಿಯ ಕುಟುಂಬದವರು ಮಂಜುರಾದಾಗಿನಿಂದ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ.

ಈ ದಾವಾ ದಾಖಲಿಸುವ ಮೊದಲು ವಾದಿಯ ಸ್ವತ್ತಿನ ಸ್ವಾಧೀನಕ್ಕೆ ತಂಟೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಸ.ನಂ.29 ನ್ನು ವಿಶ್ವಣ್ಣನವರಿಗೆ 10 ವರ್ಷ ಗುತ್ತಿಗೆ ಗೆ ನೀಡಿದ್ದು , ಅವರು 4 ವರ್ಷಕ್ಕೆ ಬಿಟ್ಟು ಹೋಗಿದ್ದು , ಪತ್ರ ಬಿಡುಗಡೆ ಮಾಡಿಸಿದ್ದೇನೆ ಸದರಿ ವ್ಯಕ್ತಿಗೆ ನೋಂದಣಿ ಗುತ್ತಿಗೆ ಪತ್ರ ಬರೆಸಿದ್ದು , ಅದನ್ನು ಈಗ್ಗೆ 2 ವರ್ಷಗಳ ಹಿಂದೆ ಕ್ಯಾನ್ಸಲ್ ಮಾಡಿಸಿದ್ದೇನೆ , ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ವಿಶ್ವನಾಥ್ ರವರು ದಾಳಿಂಬೆ ಬೆಳೆಯಲು ನಮ್ಮ ಜಮೀನಿಗೆ ಬೋರ್ ವೆಲ್ ಮತ್ತು ತಂತಿ ಬೇಲಿಯನ್ನು ಹಾಕಿಸಿದ್ದರು ಎಂದರೆ ಸರಿ. ಗುತ್ತಿಗೆ ಪತ್ರದಲ್ಲಿ ಚೆಕ್ಕು ಬಂದಿ ಬರೆದಿದೆ ಎಂದರೆ ಸಾಕ್ಷಿಯು ನಾನು ಗಮನಿಸಿಲ್ಲ ಎಂದು ನುಡಿಯುತ್ತಾರೆ. ವಾದಿಯ ಸ್ವತ್ತಿನ ಪಶ್ಚಿಮಕ್ಕೆ ಇರುವ ಸ.ನಂ.34 ರ ಜಮೀನನ್ನು ಲಪಟಾಯಿಸುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದ ಪತ್ರದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನಾನು ತಿಳಿದುಕೊಂಡಿಲ್ಲ ನನ್ನ ಲಿಖಿತ ಹೇಳಿಕೆಯಲ್ಲಿನ ವಿಚಾರಗಳನ್ನು ನಾನು ತಿಳಿದುಕೊಂಡಿದ್ದೇನೆ. ಸ.ನಂ. 60 ರಲ್ಲಿ ವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ವಾದಿಗಳ ಜಮೀನಿಗೂ ನನ್ನ ಜಮೀನಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿ ಸ.ನಂ. 60 ಜಮೀನಿನ ಸ್ವಾಧೀನದಲ್ಲಿದ್ದು , ನಾನು ನನ್ನ ಜಮೀನಿನ ಸ್ವಾಧೀನದಲ್ಲಿದ್ದೇನೆ ಎಂದರೆ ಸಾಕ್ಷಿಯು ವಾದಿ ಸ.ನಂ. 60 ರ ಜಮೀನಿನ ಸ್ವಾಧೀನದಲ್ಲಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ , ನಾನು ನಮ್ಮ ಜಮೀನಿನ ಸ್ವಾಧೀನದಲ್ಲಿದ್ದೇನೆ ಎಂದು ನುಡಿಯುತ್ತಾರೆ.

ವಾದಿಯರ ಜಮೀನಿನ ಪಶ್ಚಿಮಕ್ಕೆ ರಾಮಯ್ಯ ಮತ್ತು ಕಳವಯ್ಯ ಇದ್ದಾರೆ ಎಂದರೆ ಸಾಕ್ಷಿಯು ಆ ಸ್ವತ್ತು ಸ.ನಂ. 60 ಅಲ್ಲ , ಸ.ನಂ.33 ರಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ಸ.ನಂ. 33 ರ ಪಹಣಿಯನ್ನು ನೋಡಿದ್ದೇನೆ , ಲಿಂಗಯ್ಯ ಬಿನ್ ಸಿದ್ದಯ್ಯನವರ ಹೆಸರಿನಲ್ಲಿದೆ. ವಾದಿಯ ದಾವಾ ಸ್ವತ್ತಿನ ಉತ್ತರಕ್ಕೆ ಭೋಗೇರಾಮಯ್ಯ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ದಕ್ಷಿಣಕ್ಕೆ ದಾಸಣ್ಣ ಇದ್ದಾರೆ ಎಂದರೆ ಸರಿಯಲ್ಲ .

ದಾವಾ ಸ್ವತ್ತನ್ನು ನ್ಯಾಯಾಲಯದ ನಿಯೋಗಿಯ ಮೂಲಕ ಅಳತೆ ಮಾಡಿಸಲು ನನ್ನ ತಕರಾರು ಇಲ್ಲ. ಈ ದಾವಾ ದಾಖಲಿಸುವ ಮೊದಲು ವಾದಿ ಪ್ರತಿವಾದಿಯರ ವಿರುದ್ಧ ದೂರು ಸಲ್ಲಿಸಿದ್ದರು ಎಂದರೆ ಸರಿ. ಪೋ.ಸರು ನಮ್ಮಿಬ್ಬರನ್ನು ಕರೆಸಿ ವಾದಿಯ ಜಮೀನಿಗೆ ನಾನು ನನ್ನ ಜಮೀನಿಗೆ ವಾದಿ ಇಬ್ಬರೂ ತಂಟೆ ಮಾಡಿಕೊಳ್ಳಬೇಡಿ ಎಂದು ಬುದ್ದಿವಾದ ಹೇಳಿದ್ದರು ಎಂದರೆ ಸರಿ. ವಾದಿ ಯಾವುದೇ ಜಮೀನಿನಲ್ಲಿ ಸ್ವಾಧೀನದಲ್ಲಿಲ್ಲ ಎಂದು ಪೋಲಿಸರಿಗೆ ಹೇಳಿದ್ದೆ ಎಂದರೆ ಸರಿ. ಪೋಲಿಸರು ವಾದಿಗೆ ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿ ಎಂದು ಹೇಳಿದ್ದರು ಎಂದರೆ ನನಗೆ ಗೊತ್ತಿಲ್ಲ.

ವಾದಿ ಸ.ನಂ. 60 ರಲ್ಲಿ ಸ್ವಾಧೀನದಲ್ಲಿದ್ದಾರೂ ನಾವು ಸ್ವಾಧೀನದಲ್ಲಿದ್ದೇವೆ ಎಂದು ನನ್ನ ಹೆಂಡತಿಯಿಂದ ಸುಳ್ಳು ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.